**<u>ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ 72ರಡಿ ನೀಡಿರುವ ಸೂಚನೆ ಸಂಖ್ಯೆ 52ಕ್ಕೆ ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಹೇಳಿಕೆ</u>**

## <u>ಸೂಚನೆ:-</u>

**ದಿನಾಂಕ: 13-11-2023 ರಂದು ಕುಂದಾಪುರ ತಾಲ್ಲೂಕಿನ ಗಂಗೊಳ್ಳಿಯ ಕಿರುಬಂದರಿನಲ್ಲಿ ನಿಲ್ಲಿಸಿದ ಮೀನುಗಾರಿಕಾ ದೋಣಿಗಳು ಬೆಂಕಿಗಾಹುತಿಯಾಗಿ ದುರಂತ ಸಂಭವಿಸಿದ ಪ್ರಕರಣದಲ್ಲಿ ಅಪಾರ ಪ್ರಮಾಣದ ನಷ್ಟ ಸಂಭವಿಸಿದ್ದು, ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸುವ ಕುರಿತು.**

## <u>ಹೇಳಿಕೆ:-</u>

ದಿನಾಂಕ: 13-11-2023 ರಂದು ಬೆಳಿಗ್ಗೆ ಸುಮಾರು 8:00 ಗಂಟೆಗೆ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಗಂಗೊಳ್ಳಿ ಗ್ರಾಮದ ಮ್ಯಾಂಗನೀಸ್ ವಾರ್ಫ್ ಮೇಲೆ ನಿಲುಗಡೆ ಮಾಡಿದ 8 ಯಾಂತ್ರೀಕೃತ ದೋಣಿಗಳು, 1 ಮೋಟರೀಕೃತ ದೋಣಿ, 2 ಡಿಂಗಿಗಳು, 8 ಬಲೆಗಳು ಮತ್ತು 2 ಬೈಕ್ ಗಳು ಸಂಪೂರ್ಣ ಅಗ್ನಿಗೆ ಆಹುತಿಯಾಗಿರುತ್ತವೆ ಹಾಗೂ 1 ಯಾಂತ್ರೀಕೃತ ದೋಣಿಗೆ ಭಾಗಶಃ ಹಾನಿಯಾಗಿರುತ್ತದೆ. ಸದರಿ ಬೆಂಕಿಯನ್ನು ನಿಯಂತ್ರಿಸಲು ಅಗ್ನಿಶಾಮಕದಳದವರು ತುರ್ತು ಕ್ರಮವಹಿಸಿ ಬೆಂಕಿಯನ್ನು ನಂದಿಸಿ ಹೆಚ್ಚಿನ ಹಾನಿಯಾಗುವುದನ್ನು ತಪ್ಪಿಸಿರುತ್ತಾರೆ. ಈ ದುರಂತದಲ್ಲಿ ಒಟ್ಟಾರೆ ಅಂದಾಜು ರೂ.7.00 ಕೋಟಿ ನಷ್ಟವಾಗಿರುತ್ತದೆ ಎಂದು ಅಂದಾಜಿಸಲಾಗಿದೆ. ಘಟನಾ ಸ್ಥಳಕ್ಕೆ ನನ್ನೊಂದಿಗೆ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ, ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಮತ್ತು ಮೀನುಗಾರಿಕೆ ನಿರ್ದೇಶಕರು ಭೇಟಿ ನೀಡಿ ಸಂತ್ರಸ್ಥರಿಗೆ ಸಾಂತ್ವನ ಹೇಳಿ ಧೈರ್ಯ ತುಂಬುವ ಕೆಲಸವನ್ನು ಮಾಡಲಾಗಿದೆ.

ಈ ಬೆಂಕಿ ದುರಂತದಲ್ಲಿ ದೋಣಿ, ಬಲೆ ಮತ್ತು ಬೈಕ್ ಗಳನ್ನು ಕಳೆದುಕೊಂಡ ಮಾಲೀಕರ ಬಗ್ಗೆ ಸರ್ಕಾರವು ಸಹಾನುಭೂತಿ ಹೊಂದಿದ್ದು, ಸರ್ಕಾರದಿಂದ ಅವರೆಲ್ಲರಿಗೂ ನಿಯಮಾನುಸಾರ ಪರಿಶೀಲಿಸಿ ಪರಿಹಾರ ನೀಡುವ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು.

---

ಸಂಖ್ಯೆ: ಪಸಂಮೀ ಇ-219 ಮೀಇಯೋ 2023

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು